ರಾಜ್ಯದಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ಯಾವ ಆಧಾರದ ಮೇಲೆ ತೆಗೆದು ಕೊಳ್ಳಲಾಗುತ್ತದೆ.

೯೪. ಶ್ರೀ ಎಚ್. ಜಿ. ಚೆನ್ನಪ್ಪ (ಮಾಗಡಿ),—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ರಾಜ್ಯದಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ಯಾವ ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತದೆ ?

ಶ್ರೀ ಆರ್. ಎನ್. ಲಕ್ಷ್ಮಿಪತಿ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು).—

ಸಣ್ಣ ನೀರಾವರಿ ಯೋಜನೆಗಳನ್ನು ಕೆಳಗೆ ನಮೂದಿಸಿರುವ ಆಧಾರದ ಮೇಲೆ ೧೯೭೭ನೇ ಇಸವಿಯಿಂದ ಮಂಜೂರು ಮಾಡಲಾಗುತ್ತಿದೆ.

ಹೊಸದಾಗಿ ನಿರ್ಮಿಸುವ ಕೆರೆಗಳಿಗೆ : (೧) ೨೪'' ಗಳಿಗಿಂತ ಕಡಿಮೆ ಮಳೆ ಬೀಳುವ ಪ್ರದೇಶಗಳಿಗೆ ಎಕರೆ ಒಂದಕ್ಕೆ ರೂ. ೩೨೫೦-೦೦

(೨) ೨೪'' ಗಳಿಗಿಂತ ಹೆಚ್ಚು ಮಳೆ ಬೀಳುವ ಪ್ರದೇಶಗಳಿಗೆ ಎಕರೆ ಒಂದಕ್ಕೆ ರೂ. ೨೭೫೦-೦೦

ಮಾನ್ಯ ಸದಸ್ಯರು ಹಾಜರಿರಲಿಲ್ಲ

ಶಹಬಾದಿನ ಎ. ಸಿ. ಸಿ. ಸಿಮೆಂಟ್ ಫ್ಯಾಕ್ಟರಿಯ ಬಳಿ ರೋಡು ಓವರ್ ಬ್ರಿಡ್ಜ್ ಕಟ್ಟುವ ಬಗ್ಗೆ.

೯೫. ಶ್ರೀ ಕೆ. ಜಿ. ಶಾಣಪ್ಪ (ಶಹಬಾದ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಶಹಬಾದಿನಲ್ಲಿ ವಾಹನ ಸಂಚಾರ ತೀರಾ ಹೆಚ್ಚಾಗಿರುವುದರಿಂದ ಎ. ಸಿ. ಸಿ. ರೈಲ್ವೆ ಗೇಟಿನ ಮೇಲೆ ಹಾದುಹೋಗುವ ''ಓವರ್ ಬ್ರಿಡ್ಜನ್ನು'' ಕಟ್ಟಿಸಬೇಕೆಂದು ಅನೇಕ ವರ್ಷಗಳಿಂದ ಅಲ್ಲಿನ ಜನ ಮನವಿ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಇದರ ಬಗ್ಗೆ ಸರಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

(ಆ) ಈ ವಿಷಯದಲ್ಲಿ ಕೇಂದ್ರ ರೈಲ್ವೆ ಅಧಿಕಾರಿಯೊಂದಿಗೆ ಪತ್ರ ವ್ಯವಹಾರ ನಡೆದಿದೆ. ಮುಂದಿನ ಕ್ರಮವನ್ನು ಪ್ರಸ್ತಾವನೆಗೆ ಅನುಮೋದನೆ ಸಿಕ್ಕಿದ ಕೂಡಲೇ ತೆಗೆದುಕೊಳ್ಳಲಾಗುವುದು .

ಶ್ರೀ ಕೆ.ಬಿ. ಶಾಣಪ್ಪ —ಶಹಬಾದಿನಲ್ಲಿ ರೈಲ್ವೆ ಗೇಟಿನ ಮೇಲೆ ಓವರ್‌ಬ್ರಿಡ್ಜನ್ನು ಕಟ್ಟಿಸುವುದಕ್ಕಾಗಿ ಯಾವ ರೀತಿಯ ಅಂದಾಜನ್ನು ತಯಾರು ಮಾಡಿದ್ದೀರಿ. ಅದರ ಅಂದಾಜು ವೆಚ್ಚವೆಷ್ಟು?

ಶ್ರೀ ಎಚ್. ಡಿ. ದೇವೇಗೌಡ —ಇದಕ್ಕಾಗಿ ಅಂದಾಜನ್ನು ತಯಾರು ಮಾಡಿಲ್ಲ, ಅಲ್ಲಿ ಓವರ್ ಬ್ರಿಡ್ಜ್ ಮಾಡಬೇಕೆಂದು ಏನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಈ ಒಂದು ಕೆಲಸವನ್ನು ರೈಲ್ವೆ ಇಲಾಖೆಯವರು ಮಾಡಬೇಕಾಗುತ್ತದೆ, ನಾವು ಆ ಬ್ರಿಡ್ಜ್‌ಗೆ ಆ ಕಡೆ ಈ ಕಡೆ ಅಪ್ರೋಚ್ ರಸ್ತೆಯನ್ನಷ್ಟೆ ಮಾಡಬೇಕಾಗುತ್ತದೆ. ಆದ್ದರಿಂದ ರೈಲ್ವೆ ಇಲಾಖೆಯವರಿಗೆ ರಾಜ್ಯ ಸರ್ಕಾರ ಇದರ ಬಗ್ಗೆ ಶಿಫಾರಸ್ಸು ಮಾಡಿದ್ದೇವೆ. ಇದನ್ನು ತೆಗೆದುಕೊಳ್ಳಬೇಕೆಂಬ ಅಭಿಪ್ರಾಯವನ್ನು ಕೇಂದ್ರದ ರೈಲ್ವೆ ಇಲಾಖೆಯವರು ಹೊಂದಿದ್ದಾರೆಂದು ಅಧಿಕೃತವಾಗಿ ಗೊತ್ತಾಗಿಲ್ಲದಿದ್ದರೂ, ಅನಧಿಕೃತವಾಗಿ ಗೊತ್ತಾಗಿದೆ. ಇದನ್ನು ೧೯೮೪-೮೫ರಲ್ಲಿ ಇದರ ಅಂದಾಜು ವೆಚ್ಚವನ್ನು ಅವರ ಬಜೆಟ್ಟಿನಲ್ಲಿ ಸೇರಿಸಿ ಮಾಡುತ್ತಾರೆಂದು ನಮಗೆ ಬಂದಿರುವ ಅನಧಿಕೃತವಾದ ವರ್ತಮಾನದ ಪ್ರಕಾರ ಹೇಳುತ್ತಿದ್ದೇವೆ. ಅವರು ಮೊದಲು ಈ ಬ್ರಿಡ್ಜನ್ನು ಮಾಡಿಕೊಡುವುದಕ್ಕೆ ಒಪ್ಪಿಗೆ ಕೊಟ್ಟರೆ ಆ ಕಡೆ ಈ ಕಡೆ ಅಪ್ರೋಚ್ ರಸ್ತೆಗೆ ಎಷ್ಟೇ ಖರ್ಚಾದರೂ ರಾಜ್ಯ ಸರ್ಕಾರ ಮಾಡಿಕೊಡುತ್ತದೆ.

ಶ್ರೀ ಕೆ. ಬಿ. ಶಾಣಪ್ಪ.—ಇದಕ್ಕಾಗಿ ತಮ್ಮ ಇಲಾಖೆಯವರು ಶೇಕಡ ಇಂತಿಷ್ಟು ಹಣವನ್ನು ಕಟ್ಟಬೇಕೆಂಬ ನಿಯಮ ಇದೆಯಂತೆ, ಅದು ನಿಜವೇ ?

ಶ್ರೀ ಎಚ್. ಡಿ. ದೇವೇಗೌಡ —ಇಲ್ಲವಲ್ಲ. ಅದು ನಮಗೆ ಬಂದಿಲ್ಲ. ಈ ಬ್ರಿಡ್ಜ್‌ನ ಅವಶ್ಯಕತೆ ಇದೆ ಎಂಬುದಾಗಿ ಒಪ್ಪಿಕೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದೇವೆ. ಆಳ-ಅಗಲನೇ ಸಾಲಿನಲ್ಲಿ ಇದನ್ನು ತೆಗೆದುಕೊಳ್ಳುತ್ತಾರೆಂದು ಅನಧಿಕೃತವಾಗಿ ಗೊತ್ತಾಗಿದೆ. ಅಧಿಕೃತವಾಗಿ ಬಂದಿಲ್ಲ. ಇದರ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಪತ್ರ ವ್ಯವಹಾರ ಮಾಡಿ ಅವರ ಮನವೊಲಿಸಿ ಈ ಕೆಲಸವನ್ನು ಆದಷ್ಟು ಜಾಗ್ರತೆ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಹುಮ್ನಾಬಾದ್ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಯೋಜನೆಗಳು.

೯೬. ಶ್ರೀ ಬಸವರಾಜ ಪಾಟೀಲ್ (ಹುಮನಾಬಾದ್).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(೧) ಹುಮನಾಬಾದ್ ತಾಲ್ಲೂಕಿನಲ್ಲಿ ಈವರೆಗೆ ಸಣ್ಣ ನೀರಾವರಿ ಯೋಜನೆಯನ್ವಯ ಇದ್ದ ಕೆರೆಗಳೆಷ್ಟು ?

(ಅ) ಎಷ್ಟು ಕೆರೆಗಳ ಕೆಲಸ ಪೂರ್ತಿಯಾಗಿವೆ ಹಾಗೂ ಅವುಗಳಿಂದ ಎಷ್ಟು ಎಕರೆ ಭೂಮಿಗೆ ನೀರು ಸರಬರಾಜಾಗುವುದು ;

(ಬ) ಇನ್ನು ಪೂರ್ತಿಯಾಗದೆ ಇರುವ ಕೆರೆಗಳೆಷ್ಟು ;

(೨) ಮೇಲ್ಕಾಣಿಸಿದ ಯೋಜನೆಯಲ್ಲಿ ಗಡವಂತಿ, ಮುತ್ತಂಗಿ ಮತ್ತು ಚಾಂಗಲೇರ ಕೆರೆಗಳನ್ನು ಸೇರಿಸಲಾಗಿದೆಯೇ ;

(ಅ) ಹಾಗಿದ್ದಲ್ಲಿ ಕಾರಣಗಳೇನು ;

(ಬ) ಹಾಗಿದ್ದಲ್ಲಿ ಕೆಲಸವನ್ನು ಎಂದು ಪ್ರಾರಂಭಿಸಲಾಗುವುದು ;

(೩) ಇವುಗಳಲ್ಲಿ ಯಾವುದಾದರೂ ವಿಶ್ವ ಬ್ಯಾಂಕಿನ ನೆರವಿನಿಂದ ಯೋಜಿತವಾದವುಗಳಿವೆಯೆ ;

(೪) ಬೀದರ್ ತಾಲ್ಲೂಕಿನಲ್ಲಿಯ ಗಂಗನಕೋಡ ಗ್ರಾಮಕ್ಕೆ ಸಣ್ಣ ನೀರಾವರಿ ಯೋಜನೆಯಲ್ಲಿ ಕೆರೆ ಕಟ್ಟುವ ಯೋಜನೆ ಬಗ್ಗೆ ಸಲಹೆ ಏನಾದರೂ ಸರಕಾರದವರಲ್ಲಿದೆಯೇ ;

(ಅ) ಹಾಗಿದ್ದಲ್ಲಿ ಇವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಆರ್. ಎನ್. ಲಕ್ಷ್ಮಿಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

(೧) ೧೩ ಕೆರೆಗಳು.

(ಅ) ೯ ಕೆರೆಗಳು ೧೮೬೫ ಹೆಕ್ಟೇರುಗಳಂ.

(ಬ) ನಾಲ್ಕು. ಒಂದು ಕೆರೆ ನಿರ್ಮಾಣದ ಹಂತದಲ್ಲಿದೆ. ಮೂರು ಕೆರೆಗಳನ್ನು ತೆಗೆದುಕೊಂಡಿಲ್ಲ.

(೨) ಹೌದು.

(ಅ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಬ) ಗಡವಂತಿ ಮತ್ತು ಮುತ್ತಂಗಿ ಕೆರೆಗಳನ್ನು ತಾಂತ್ರಿಕ ಕಾರಣಗಳಿಂದ ಕೈಬಿಡಲಾಗಿದೆ. ಚಾಂಗಲೇರ ಕೆರೆಯನ್ನು ಅಂದಾಜಿಗೆ ಮುಂಜೂರಾತಿ ದೊರೆತ ಕೂಡಲೇ ಕೆಲಸ ಪ್ರಾರಂಭಿಸಲಾಗುವುದು.

(೩) ಹೌದು — ಚಾಂಗಲೇರ ಕೆರೆ.

(೪) ಇದೆ.

(ಅ) ಈ ಯೋಜನೆಯಂ ಅನ್ವೇಷಣೆಯ ಹಂತದಲ್ಲಿದೆ.